# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.23 ರ ನಾಗವಾರಕ್ಕೆ ಸಂಬಂಧಿಸಿದಂತೆ ದಿನಾಂಕ: 03-09-2022 ರಂದು ಶ್ರೀ.ಡಾ||ಧನ್ಯಕುಮಾರ್ ನೋಡಲ್ ಅಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರ ವಿವರ:-

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ಡಾ||ಧನ್ಯಕುಮಾರ್ | ನೋಡಲ್ ಅಧಿಕಾರಿಗಳು ಮತ್ತು ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ.23 ನಾಗವಾರ |
| 2 | ಶ್ರೀ.ನಾಗರಾಜು | ಸಹಾಯಕ ಅಭಿಯಂತರರು & ಕಾರ್ಯದರ್ಶಿಗಳು ವಾರ್ಡ್ ಸಂಖ್ಯೆ.23 ನಾಗವಾರ |
| 3 | ಡಾ||ಶೋಭಾ.ಎನ್ | ಆರೋಗ್ಯ ವೈದ್ಯಾಧಿಕಾರಿಗಳು ಕೆ.ಜಿ.ಹಳ್ಳಿ |
| 4 | ಶ್ರೀ.ರಾಯಪ್ಪ | ಹಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ.ಮೋಹನ್ ಕುಮಾರ್ | ಕಂದಾಯ ನಿರೀಕ್ಷಕರು ಹೆಚ್.ಬಿ.ಆರ್ ಉಪ-ವಿಭಾಗ |
| 6 | ಶ್ರೀ.ಶ್ರೀನಿವಾಸ್.ಎಂ.ಎಸ್ | ಹಿರಿಯ ಪಶುವೈದ್ಯಕೀಯ ನಿರೀಕ್ಷಕರು (ಪಶುಸಂಗೋಪನೆ) |
| 7 | Beulah.P | ಶಿಕ್ಷಕರು ಕಲ್ಯಾಣ ಇಲಾಖೆ (ಪೂರ್ವ) ವಿಭಾಗ |
| 8 | ಶ್ರೀಮತಿ.ವಿದ್ಯಾ.ಕೆ.ವಿ | ಕೆ.ಜಿ.ಹಳ್ಳಿ ಯು.ಪಿ.ಹೆಚ್.ಸಿ |
| 9 | ಶ್ರೀ.ಸಂತೋಷ್ | ಕಿರಿಯ ಆರೋಗ್ಯ ನಿರೀಕ್ಷಕರು |
| 10 | ಶ್ರೀ.ದಿಲೀಪ್ | ಮೀಟರ್ ರೀಡಿಂಗ್ ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 11 | ಶ್ರೀ.ಆರ್.ಮಂಜುನಾಥ್ | ವಾಟರ್ ಇನ್ಸ್‌ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 12 | ಶ್ರೀ.ಎನ್.ಸಲೀಂ ಖಾನ್ | ಕರ ವಸೂಲಿಗಾರರು |
| 13 | ಶ್ರೀ.ಶಾಹೀದ್ | ಕರ ವಸೂಲಿಗಾರರು |
| | ವಾರ್ಡ್‌ನ ಸ್ಥಳೀಯರು / ಸದಸ್ಯರುಗಳು | |

ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಮತ್ತು ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸ್ವಾಗತಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

1) ಆರೋಗ್ಯ ವೈದ್ಯಾಧಿಕಾರಿಗಳು:- ವಾರ್ಡ್‌ನ ನಾಗವಾರ ಪ್ರದೇಶದಲ್ಲಿ 18 ವಯಸ್ಸು ಮೇಲ್ಪಟ್ಟ ಎಲ್ಲಾ ಸಾರ್ವಜನಿಕರಿಗೂ ಬೂಸ್ಟರ್ ಡೋಸ್‌ಗಳನ್ನು ನೀಡಲು ಹಾಗೂ ಅವಶ್ಯಕವಿದ್ದಲ್ಲಿ ಕ್ಯಾಂಪ್ ವ್ಯವಸ್ಥೆ ಮಾಡಲು ಅಧಿಕಾರಿಗಳಿಗೆ ಸಭೆಯಲ್ಲಿ ಹಾಜರಿದ್ದ ವೈದ್ಯಾಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ರವರು ಸಭೆಯಲ್ಲಿ ತಿಳಿಸಿದರು ಹಾಗೂ ಸೇಟ್‌ಲೇನ್, ಸಮಧಾನನಗರ, ಚೂನಾಲೇನ್, ಹಾಗೂ ಅಧಿಕ ಹೆಚ್ಚಿನ ಜನಸಂದಣಿ ಇರುವ ಪ್ರದೇಶಗಳಿಗೆ ಸೊಳ್ಳೆಗಳ ಹಾವಳಿ ಹೆಚ್ಚಾಗಿದ್ದು, ಶುಶ್ರೂಶಕರು ಹಾಗೂ ಆಶಾ ಕಾರ್ಯಕರ್ತೆಯರನ್ನು ಸರ್ಕಾರಿ ಶಾಲೆ, ಖಾಸಗಿ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಆರೋಗ್ಯ ತಪಾಸಣೆ ನಡೆಸಬೇಕೆಂದು ಹಾಗೂ ವಾರ್ಡ್‌ನ ವ್ಯಾಪ್ತಿಯಲ್ಲಿ ಫಾಗಿಂಗ್ ಮತ್ತು ಸ್ಪ್ರೇಯಿಂಗ್ ಸಿಂಪಡಿಸಬೇಕೆಂದು ಹಾಗೂ ಡೇಂಗ್ಯೂ ಜ್ವರದ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಬೇಕೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

(ಕ್ರಮ:- ಆರೋಗ್ಯ ವೈದ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ಬಿ.ಬಿ.ಎಂ.ಪಿ)

2) <u>ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ (ಬಿ.ಡಬ್ಲ್ಯೂ.ಎಸ್.ಎಸ್.ಬಿ):-</u> ವಾರ್ಡ್ ವ್ಯಾಪ್ತಿಯಲ್ಲಿ ಮಳೆಗಾಲವಿರುವುದರಿಂದ ರಸ್ತೆ ಒಳಚರಂಡಿಗಳು ಬ್ಲಾಕ್ ಆಗುತ್ತಿದ್ದು, ಅದನ್ನು ಸರಿಪಡಿಸಿ ನೀರನ್ನು ಸರಾಗವಾಗಿ ಹರಿಯುವಂತೆ ಮಾಡುವುದು ಹಾಗೂ ಕಾಲರಾ ಮತ್ತು ಇನ್ನಿತರೆ ರೋಗಗಳು ಬರುವ ಸಂಭವವಿರುವುದರಿಂದ ಅದನ್ನು ತಡೆಗಟ್ಟಲು ಕಾಮಗಾರಿಯನ್ನು ನಿರ್ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ರವರಿಗೆ ವಾರ್ಡ್‌ನ ನೋಡಲ್ ಅಧಿಕಾರಿಗಳು ತಿಳಿಸಿದರು.

<u>(ಕ್ರಮ :- ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಉಪ-ವಿಭಾಗ, ಕಲ್ಯಾಣನಗರ)</u>

3) <u>ವಿದ್ಯುತ್ ವಿಭಾಗ:-</u> ವಾರ್ಡ್ ವ್ಯಾಪ್ತಿಯ ವೀರಣ್ಣಪಾಳ್ಯ ಸುತ್ತಮುತ್ತಲಿನ ಪ್ರದೇಶದಲ್ಲಿ ಬೀದಿದೀಪಗಳು ಸರಿಯಾಗಿ ನಿರ್ವಹಣೆಯಾಗದೇ ಇರುವುದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿರುತ್ತದೆ. ಈ ಬಗ್ಗೆ ಸದರಿ ಪ್ರದೇಶದಲ್ಲಿ ಕೂಡಲೇ ವಿದ್ಯುತ್ ದೀಪಗಳನ್ನು ಅಳವಡಿಸಬೇಕೆಂದು ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ ಗೋವಿಂದಪುರ ಮುಖ್ಯರಸ್ತೆ, ಗೋವಿಂದಪುರ ಪೋಲೀಸ್ ಠಾಣೆ ಹತ್ತಿರ ಕಂಬಗಳಿಂದ 5 ಅಡಿ ಎತ್ತರಕ್ಕೆ ತಂತಿಯನ್ನು ಅಳವಡಿಸಿರುತ್ತಾರೆ. ತಂತಿಗಳು ಕಟ್ಟಾಗಿ ಸಾರ್ವಜನಿಕರಿಗೆ ತೊಂದರೆಯಾಗುವುದಾಗಿ ತಿಳಿಸಿದರು. ಹಾಗೂ ವೈಯಾಲಿಕಾವಲ್ ಕೆಲವು ಪ್ರದೇಶಗಳಲ್ಲಿ ಹೈ ಮಾಸ್ ಲೈಟ್‌ಗಳನ್ನು ಅಳವಡಿಸಬೇಕೆಂದು ಕೋರಿರುತ್ತಾರೆ.

ಈ ಬಗ್ಗೆ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

<u>(ಕ್ರಮ :- ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ, 16ನೇ ಮಹಡಿ ಮೆಯೋಹಾಲ್, ಪಿ.ಯು.ಬಿ ಕಟ್ಟಡ)</u>

4) <u>ಬೆಸ್ಕಾಂ ಉಪ-ವಿಭಾಗ:-</u> ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಲೈನ್ ಅಳವಡಿಸಲು ಬಿ.ಬಿ.ಎಂ.ಪಿ ವತಿಯಿಂದ ಅನುಮೋದನೆಯನ್ನು ಪಡೆಯದೆ ರಸ್ತೆಯನ್ನು ಕತ್ತರಿಸಿ ಅವುಗಳನ್ನು ಸರಿಪಡಿಸದೇ ಹಾಗೆಯೇ ಬಿಟ್ಟಿರುತ್ತಾರೆ ಮತ್ತು ಬೀದಿ ಬದಿಯ ಲೈನ್ ಕೆಳಗಿನ ಮರಗಳನ್ನು ಕತ್ತರಿಸಿ ರಸ್ತೆಯಲ್ಲೇ ಬಿಟ್ಟಿರುತ್ತಾರೆಂದು ಅವುಗಳನ್ನು ತೆರವುಗೊಳಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಿದರು.

<u>(ಕ್ರಮ :- ಸಹಾಯಕ ಕಾರ್ಯಪಾಲಕ ಅಭಿಯಂತರರು , ಬೆಸ್ಕಾಂ ಉಪ-ವಿಭಾಗ)</u>

5) <u>ಘನತ್ಯಾಜ್ಯ ನಿರ್ವಹಣೆ</u>:- ವಾರ್ಡ್ ವ್ಯಾಪ್ತಿಯ, ಇಂದಿರಾ ಕ್ಯಾಂಟೀನ್ 9ನೇ ಮುಖ್ಯರಸ್ತೆ, ವೈಯಾಲಿಕಾವಲ್, ವೀರಣ್ಣಪಾಳ್ಯ ಸ್ಮಶಾಣದ ರಸ್ತೆ, ಇಂಡಿಯನ್ ಪಬ್ಲಿಕ್ ಶಾಲೆ ಹತ್ತಿರ ರಸ್ತೆಗಳಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಮತ್ತು ರಸ್ತೆಗಳನ್ನು ಸರಿಯಾಗಿ ಸ್ವಚ್ಛಗೊಳಿಸುತ್ತಿಲ್ಲವೆಂದು ಹಾಗೂ ಘನತ್ಯಾಜ್ಯ ಪಾಯಿಂಟ್‌ಗಳ ಹತ್ತಿರ ಆಟೋಗಳಲ್ಲಿ ಮತ್ತು ವಾಹನಗಳಲ್ಲಿ ಅಪರಿಚಿತರು ಕಸದ ರಾಶಿಯನ್ನು ಸುರಿಯುತ್ತಿದ್ದಾರೆಂದು ಸಾರ್ವಜನಿಕರು ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ ಪ್ಲಾಸ್ಟಿಕ್ ಬಳಕೆಯನ್ನು ನಿಷೇದಿಸುವಂತೆ ಕ್ರಮ ವಹಿಸುವುದು ಮತ್ತು ವೀರಣ್ಣಪಾಳ್ಯ ಸ್ಮಶಾಣದ ರಸ್ತೆ, ಇಂಡಿಯನ್ ಪಬ್ಲಿಕ್ ಶಾಲೆ ಹತ್ತಿರ ಇರುವ ಕಸ ಸಂಗ್ರಹಣೆ ಕೇಂದ್ರದಲ್ಲಿ ಕಸ ವಿಂಗಡಿಸಿದ ನಂತರ ಬ್ಲೀಚಿಂಗ್ ಪೌಡರ್ ಹಾಗೂ ಔಷಧಿಯನ್ನು ಸಿಂಪಡಿಸಲು ತಿಳಿಸಿದರು. ತಪ್ಪಿದಲ್ಲಿ ಪ್ಲಾಸ್ಟಿಕ್ ಮಾಲೀಕರಿಗೆ ದಂಡವನ್ನು ವಿಧಿಸಬೇಕೆಂದು ಘನತ್ಯಾಜ್ಯ ನಿರ್ವಹಣೆ ವಿಭಾಗ ರವರಿಗೆ ಕ್ರಮ ಕೈಗೊಳ್ಳುವಂತೆ ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

<u>(ಕ್ರಮ :-ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ ಬೆಂಗಳೂರು)</u>

6) ಸಂಚಾರಿ ಪೋಲೀಸ್ ಇಲಾಖೆ:- ವಾರ್ಡ್ ವ್ಯಾಪ್ತಿಯ ವೈಯಾಲಿಕಾವಲ್ ಹಾಗೂ ನಾಗವಾರ ಮುಖ್ಯರಸ್ತೆಯಲ್ಲಿ ವಾಹನಗಳನ್ನು ರಸ್ತೆ ಬದಿಯಲ್ಲೇ ನಿಲ್ಲಿಸಿರುವುದರಿಂದ ಅವುಗಳನ್ನು ತೆರವುಗೊಳಿಸಲು ಸಂಚಾರಿ ಪೋಲೀಸ್ ಠಾಣೆ ಕೆ.ಜಿ.ಹಳ್ಳಿ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.
(ಕ್ರಮ : ಸಂಚಾರಿ ಪೋಲೀಸ್ ಠಾಣೆ ಕೆ.ಜಿ.ಹಳ್ಳಿ ಬೆಂಗಳೂರು)

7) ಕಾಮಗಾರಿ ಇಲಾಖೆ:- ವಾರ್ಡ್ ವ್ಯಾಪ್ತಿಯಲ್ಲಿ ವೈಯಾಲಿಕಾವಲ್ ಬಡಾವಣೆಯ ಇಂದಿರಾ ಕ್ಯಾಂಟೀನ್‌ನಿಂದ ಇಂಡಿಯನ್ ಪಬ್ಲಿಕ್ ಸ್ಕೂಲ್ ಮುಖಾಂತರ ಹೊರವರ್ತುಲ ಸೇರುವ ಎರಡು ಬದಿ ರಸ್ತೆಯಲ್ಲಿ ಫುಟ್‌ಪಾತ್‌ಗಳ ಮೇಲೆ ಸ್ಲ್ಯಾಬ್‌ಗಳು ಬಿದ್ದು ಹೋಗಿದ್ದು, ಅವುಗಳನ್ನು ಸರಿಪಡಿಸಲು ಹಾಗೂ ರಸ್ತೆಗೆ ಲೇನ್‌ಪೇಂಟ್ ಅಳವಡಿಸಲು ಸಭೆಯಲ್ಲಿ ತಿಳಿಸಿದರು ಮತ್ತು ಪೋಲೀಸ್ ಚೌಕಿ ಮುಂಭಾಗ ನಿರಾಶ್ರಿತರು ಬೀದಿ ಬದಿಯಲ್ಲಿ ವಾಸಿಸುತ್ತಿದ್ದಾರೆ. ಅವರನ್ನು ತೆರವುಗೊಳಿಸಲು ಸಭೆಯಲ್ಲಿ ತಿಳಿಸಿದರು.
(ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ)

8) ಕಂದಾಯ ಇಲಾಖೆ:- ವಾರ್ಡ್ ವ್ಯಾಪ್ತಿಯಲ್ಲಿ ವಾರ್ಡ್ ವಿಂಗಡಣೆಯಾಗಿದ್ದು, ಮತದಾರರ ಪರಿಷ್ಕರಣ ಪಟ್ಟಿ ಹಾಗೂ ಮತದಾರರ ಪಟ್ಟಿಗೆ ಸರ್ವೇ ಕಾರ್ಯ ನಡೆಯುತ್ತಿದ್ದು, ಮತದಾರರ ಪಟ್ಟಿಯಲ್ಲಿ ಅದಲು-ಬದಲಾಗಿದ್ದು, ಅದನ್ನು ಸರಿಪಡಿಸಲು ಕಂದಾಯ ಇಲಾಖೆಯವರಿಗೆ ತಿಳಿಸಬೇಕೆಂದು ಮತ್ತು ಮತದಾರರ ಗುರುತಿನ ಚೀಟಿ ಹಾಗೂ ಲಿಂಕ್ ಮಾಡುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಸಭೆಯಲ್ಲಿ ತಿಳಿಸಿದರು.
(ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ)

9) ಕಲ್ಯಾಣ ಇಲಾಖೆ: ವಾರ್ಡ್ ವ್ಯಾಪ್ತಿಯಲ್ಲಿ 2021-22ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳಡಿ ವಿವಿಧ ಯೋಜನೆಗಳಿಗೆ ಸಲ್ಲಿಕೆಯಾಗಿರುವ ಫಲಾನುಭವಿಗಳ ಅರ್ಜಿಗಳಿಗೆ ಸಹಾಯಕ ಕಂದಾಯ ಅಧಿಕಾರಿ (ಕಲ್ಯಾಣ) ಪೂರ್ವ ರವರು ಅನುಮೋದನೆಗೆ ಆಯ್ಕೆ ಮಾಡಿರುವ 7 ಫಲಾನುಭವಿಗಳ ಪಟ್ಟಿಯನ್ನು ವಾರ್ಡ್ ಸಮಿತಿ ಸಭೆಯಲ್ಲಿ ಮಂಡಿಸಲು ತಿಳಿಸಿರುತ್ತಾರೆ.

(ಕ್ರಮ : ಸಹಾಯಕ ಕಂದಾಯ ಅಧಿಕಾರಿ (ಕಲ್ಯಾಣ) ಇಲಾಖೆ)

10) ಪಶುಸಂಗೋಪನಾ ಇಲಾಖೆ: ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ವಾಹನಗಳ ಸಂಚಾರಕ್ಕೆ ಮತ್ತು ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿರುತ್ತದೆ. ಬೀದಿ ನಾಯಿಗಳ ಹಾವಳಿಯನ್ನು ತಡೆಗಟ್ಟುವಂತೆ ಸಾರ್ವಜನಿಕರು ಸಭೆಯಲ್ಲಿ ತಿಳಿಸಿರುತ್ತಾರೆ.

(ಕ್ರಮ : ಪಶುಸಂಗೋಪನಾ ಇಲಾಖೆ ಪೂರ್ವ ವಲಯ)

ಮುಂದುವರೆದು ದಿನಾಂಕ: 03-09-2022 ರಂದು ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾಗಿರುವ ಅಧಿಕಾರಿಗಳನ್ನು ಮುಂದಿನ ವಾರ್ಡ್ ಸಮಿತಿ ಸಭೆಗೆ ತಪ್ಪದೇ ಹಾಜರಾಗುವಂತೆ ತಿಳಿಸಲಾಗಿದೆ. ತಪ್ಪಿದ್ದಲ್ಲಿ ಮೇಲಾಧಿಕಾರಿಗಳಿಗೆ ವರದಿ ಮಾಡಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

ಶ್ರೀ.ನಾಗರಾಜು
ಕಾರ್ಯದರ್ಶಿಗಳು
ವಾರ್ಡ್ ಸಂಖ್ಯೆ.23 ನಾಗವಾರ

(ಶ್ರೀ.ಧನ್ಯಕುಮಾರ್)
ನೋಡಲ್ ಅಧಿಕಾರಿ & ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ.23 ನಾಗವಾರ

ಪ್ರತಿಯನ್ನು:

1. ಕೌನ್ಸಿಲ್ ಕಾರ್ಯದರ್ಶಿಗಳು ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ರವರ ಅವಗಾಹನೆಗೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮುಖ್ಯಅಭಿಯಂತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ವಿಭಾಗ ರವರಿಗೆ ಸಲ್ಲಿಸಿದೆ
5. ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ (ಪೂರ್ವ) ರವರಿಗೆ ಸಲ್ಲಿಸಿದೆ.
6. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು BWSSB ಉಪ ವಿಭಾಗ (ಪೂರ್ವ) ಕಲ್ಯಾಣನಗರ ರವರಿಗೆ ಸಲ್ಲಿಸಿದೆ.
7. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು BWSSB ಉಪ ವಿಭಾಗ, ಕೇಂದ್ರ-3, ಫ್ರೇಜರ್‌ಟೌನ್, ಅಶೋಕ ಟಾಕೀಸ್ ಎದುರು ಬೆಂಗಳೂರು ರವರಿಗೆ ಸಲ್ಲಿಸಿದೆ.
8. ಸಹಾಯಕ ಕಂದಾಯ ಅಧಿಕಾರಿ ಹೆಚ್.ಬಿ.ಆರ್ ಉಪವಿಭಾಗ ರವರಿಗೆ ಸಲ್ಲಿಸಿದೆ.
9. ಸಹಾಯಕ ಕಂದಾಯ ಅಧಿಕಾರಿ ಕಲ್ಯಾಣ ಇಲಾಖೆ (ಪೂರ್ವ) ರವರಿಗೆ ಸಲ್ಲಿಸಿದೆ.
10. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಬೆಸ್ಕಾಂ ಇ-9, ಉಪವಿಭಾಗ, ನಾಗವಾರ ರವರಿಗೆ ಸಲ್ಲಿಸಿದೆ.
11. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಬೆಸ್ಕಾಂ ಇ-1 ಉಪವಿಭಾಗ, ಪಿಳ್ಳಣ್ಣಗಾರ್ಡನ್, 9ನೇ ಮುಖ್ಯರಸ್ತೆ, ಬೆಂಗಳೂರು, ರವರಿಗೆ ಸಲ್ಲಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ (ಸರ್ವಜ್ಞನಗರ) ವಿಭಾಗ ರವರಿಗೆ ಸಲ್ಲಿಸಿದೆ.
13. ಠಾಣಾಧಿಕಾರಿಗಳು, ಕೆ.ಜಿ.ಹಳ್ಳಿ / ಗೋವಿಂದಪುರ ಪೋಲೀಸ್ ಠಾಣೆ / ಟ್ರಾಫೀಕ್ ಪೋಲೀಸ್ ಠಾಣೆ ರವರಿಗೆ ಸಲ್ಲಿಸಿದೆ.
14. ಆರೋಗ್ಯ ವೈಧ್ಯಾಧಿಕಾರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರ ಕೆ.ಜಿ.ಹಳ್ಳಿ ರವರಿಗೆ ಸಲ್ಲಿಸಿದೆ.
15. ವಲಯ ಅರಣ್ಯಾಧಿಕಾರಿಗಳು ಬಿ.ಬಿ.ಎಂ.ಪಿ ರವರಿಗೆ ಸಲ್ಲಿಸಿದೆ.
16. ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರು ನಾಗವಾರ ವಾರ್ಡ್ ಸಂಖ್ಯೆ-23.
17. ಪಶುಸಂಗೋಪನಾ ಇಲಾಖೆ ಬಿ.ಬಿ.ಎಂ.ಪಿ ರವರಿಗೆ ಸಲ್ಲಿಸಿದೆ.
18. ಕಛೇರಿ ಕಡತಕ್ಕೆ.